# ಸ್ವಾಮಿ ಮುಖ್ಯಪ್ರಾಣ ನಿನ್ನ ಮರೆವರ ಗಂಟಲ ಗಾಣ

1. **Ref.:** Shri Purandara Dasara Sahitya Part – 1, Pooja Tatva, edited by Shri Betageri Krishna Sharma and Shri Bengeri Huchhu Rayaru.
2. **Ref. :** Purandara Sahitya Darshana, Samputa 1, Adhyatma Darshana edited by Prof. S.K. Ramachandra Rao
3. **Note:** The wordings mainly are as per the book in Ref. 1 above are given separately & without any highlights. The wordings in the book in Ref. 2 above and that of the singer are matching and are marked in yellow highlights.

ರಾಗ: ಮಧ್ಯಮಾವತಿ ತಾಳ: ಆದಿ

| | |
|---|---|
| ಸ್ವಾಮಿ ಮುಖ್ಯಪ್ರಾಣ ನಿನ್ನ | ಸ್ವಾಮಿ ಮುಖ್ಯಪ್ರಾಣ ನಿನ್ನ |
| ಮಲೆವರ ಗಂಟಲ ಗಾಣ | ಮಲೆವರ ಗಂಟಲ ಗಾಣ ‖ ಪ ‖ |
| ನೀ ಹಿಡಿದ್ಯೋ ರಾಮನ ಚರಣ ನೀ | ಸಕಲ ವಿದ್ಯಾ ಪ್ರವೀಣ ನೀ |
| ನ್ವೌದೌದೊ ಜಗತ್ಪ್ರಾಣ ‖ p ‖ | ಹಿಡಿದೆಯೊ ರಾಮರ ಚರಣ ‖ ಅಪ ‖ |
| | |
| ಸಂಜೀವನ ಪರ್ವತವ ನೀ | ಏಕಾದಶಿಯ ರುದ್ರ ನೀ |
| ನಂಜದೆ ತಂದ್ಯೋ ದೇವ | ಹಿಡಿದೆಯೊ ರಾಮರ ಮುದ್ರ |
| ಅಂಜನೆ ಸುತ ಸದಾಕಾವ ಹೃ- | ಸೇತುವೆ ಗಟ್ಟಿ ಸಮುದ್ರ ನೀ |
| ತ್ಕಂಜ ವಾಸ ಸರ್ವ ಜೀವ ‖ 1 ‖ | ಹಾರಿದೆಯೋ ಬಲಭದ್ರ ‖ ೧ ‖ |
| | |
| ಏಕಾದಶಿಯ ರುದ್ರ ನೀ | ಸಂಜೀವಿನಿ ಪರ್ವತವನ್ನು |
| ಒಯ್ದ್ಯೋ ರಾಮರ ಮುದ್ರ | ಅಂಜದೆ ತಂದೆಯೊ ನೀನು |
| ಸಕಲ ವಿದ್ಯಾ ಸಮುದ್ರ ನೀ | ಅಂಜನೆ ತಾನು ಸಂಭವನು ನಿನ್ನ |
| ನ್ವೌದೌದೋ ಬಲಭದ್ರ ‖ 2 ‖ | ಬೇಡಿಕೊಂಬೆನೊ ನಾನು ‖ ೨ ‖ |
| | |
| ವೈಕುಂಠದಿಂದ ಬಂದು ನೀ | ವೈಕುಂಠದಿಂದ ಬಂದು |
| ಪಂಪಾ ಕ್ಷೇತ್ರದಿ ನಿಂದು | ಪಂಪಾ ಕ್ಷೇತ್ರದಿ ನಿಂದು |
| ಯಂತ್ರೋದ್ಧಾರಕನೆಂದು ಪು- | ಯಂತ್ರೋದ್ಧಾರಕನೆಂದು ಪು- |
| ರಂದರ ವಿಠಲ ಸಲಹೆಂದು ‖ 3 ‖ | ರಂದರ ವಿಠಲನೆ ಸಲಹೆಂದು ‖ ೩ ‖ |

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿಗಳು:**

ಹಂಪಿಯಲ್ಲಿ ವ್ಯಾಸತೀರ್ಥರು ಪ್ರತಿಷ್ಠೆ ಮಾಡಿದ ಯಂತ್ರೋದ್ಧಾರಕ ಪ್ರಾಣದೇವರನ್ನು ಕುರಿತ ಸ್ತುತಿ ಇದು. ಈ ಯಂತ್ರದ ನಡುವೆ ಯೋಗಮುದ್ರೆಯಲ್ಲಿ ಕುಳಿತ ಹನುಮಂತನಿದ್ದಾನೆ; ಯಂತ್ರವನ್ನು ಸುತ್ತುರಿದ ನಿರ್ದಿಷ್ಟ ಗ್ರಂಥಿ ಸ್ಥಳಗಳಲ್ಲಿ ವಾನರ ಪರಿವಾರ ಮೂರ್ತಿಗಳಿವೆ. ಹನುಮಂತನ ಸುತ್ತ ಷಟ್ಕೋಣಯಂತ್ರವಿದೆ (ಯುಗನದ್ಧ ತ್ರಿಕೋಣದ್ವಯ). ವೃತ್ತದೊಳಗೆ ಗ್ರಂಥಾಕ್ಷರಗಳಲ್ಲಿ ಮಂತ್ರೋಲ್ಲೇಖನವಿದೆ; ಇದರಿಂದ ಯಂತ್ರೋದ್ಧಾರ ಸಾಧ್ಯವಾಗಿದೆ. ಆದುದರಿಂದಲೇ ಇದು ಯಂತ್ರೋದ್ಧಾರಕ ಯಂತ್ರ.

**ಮಲೆವರ –** ಸೆಣಸುವವರ, ಎದುರಿಸುವವರ

**ಹೃತ್** = ಹೃದಯ, ಎದೆಯ, ಅಂತಃಕರಣ, ಮನಸ್ಸು

**ಕಂಜ** = ಕಮಲಾ, ತಾವರೆ

**ಏಕಾದಶೀಯ ರುದ್ರ –** ಭಾಗವತದ ಪ್ರಕಾರ (3,12, 12) ಹನ್ನೊಂದನೆಯ ರುದ್ರ ಧೃತವ್ರತ; ಹನುಮಂತನು ರುದ್ರಾಂಶನಾದುದರಿಂದಲೂ, ರಾಮ ಸೇವೆಯನ್ನು ವ್ರತದಂತೆ ಹಿಡಿದುದರಿಂದಲೂ ಈ ವಿಶೇಷಣ ಅವನಿಗೆ ಒಪ್ಪುತ್ತದೆ.

**ಸಕಲ ವಿದ್ಯಾ ಪ್ರವೀಣ** - ಹನುಮಂತನು ಸೂರ್ಯನಿಂದ ವ್ಯಾಕರಣ ಸೂತ್ರ, ಸೂತ್ರ ವೃತ್ತಿ, ಭಾಷ್ಯ ಮತ್ತು ಸಂಗ್ರಹಗಳನ್ನು ಕಲಿತನು. ಇದಲ್ಲದೆ ಇವನು ಹನ್ನೊಂದನೆಯ ವ್ಯಾಕರಣಕಾರ, ವಾಗ್ಗೇಯಕಾರನೂ ಆಗಿದ್ದಾನೆ. (ಇವನ ಮತವನ್ನು ಉಳಿದ ವಾಗ್ಗೇಯಕಾರರು ಉದಾಹರಿಸುತ್ತಾರೆ)

**ಮುದ್ರಾ** = ಮುದ್ರಿಕೆ

**ವೈಕುಂಠ ಸ್ಥಳದಿಂದ ಬಂದು** = ಇದೊಂದು ಸ್ಥಳ ಪುರಾಣದ ಕಥೆಯು. (ಯಂತ್ರೋದ್ದಾರ ಪ್ರಾಣ ದೇವರ ಮೂರ್ತಿ ವೈಕುಂಠದಿಂದ ಬಂದುದು.)

**ಪಂಪಾ ಕ್ಷೇತ್ರ** = ತುಂಗಭದ್ರಾ ನದಿ ತೀರದಲ್ಲಿರುವ ಹಂಪೆ.

**ಯಂತ್ರೋದ್ದಾರಕ** = ಹಂಪೆಯಲ್ಲಿರುವ ಪ್ರಾಣ ದೇವರ ಹೆಸರು. ಕಪಿಬಂದಬದ್ಧ ವರ್ತುಲದಲ್ಲಿರುವ ಸಮ ಭುಜವುಳ್ಳ ಎರಡು ತ್ರಿಕೋಣಗಳ ನಟ್ಟ ನಡುವೆ ಈ ಮೂರ್ತಿಯನ್ನು ಪ್ರತಿಷ್ಠಾಪಿಸಿ, ಸುತ್ತಲೂ ಬೀಜಾಕ್ಷರಗಳನ್ನು ಕೆತ್ತಿದ್ದಾರೆ.

**Classification:** Keerthane
**Ankita:** purandara vittala
**Location:** Yantrodharaka Temple, Hampi, Karnataka.
**Category:** Hanuma Stuti
**Group Words:** hanuma, yantroddharaka, rama, hrudaya, jiva, Ekadashi, Samudra, vidya, hampi,
**Pravachana:** NA
**Explanation:** NA